ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	735
ಸದಸ್ಯರ ಹೆಸರು	ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸುವವರು	ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	22-02-2022

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಬಾಲಕರ ಮತ್ತು ಬಾಲಕಿಯರ ಬಾಲ ಮಂದಿರಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಆಶ್ರಯ ಪಡೆದಿರುತ್ತಾರೆ. (ವಿಜಯಪುರ, ಬಾಗಲಕೋಟೆ, ಬೆಳಗಾವಿ ಭಾಗಗಳಲ್ಲಿ ಆಶ್ರಯ ಪಡೆದಿರುವ ಬಾಲಕ ಮತ್ತು ಬಾಲಕಿಯರ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 69 ಸರ್ಕಾರಿ ಬಾಲಮಂದಿರಗಳಿದ್ದು, ಇದರಲ್ಲಿ 36 ಬಾಲಕರ ಬಾಲಮಂದಿರ ಹಾಗೂ 33 ಬಾಲಕಿಯರ ಬಾಲಮಂದಿರಗಳು ಕಾರ್ಯನಿರ್ವಹಿಸುತ್ತಿವೆ. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016ರ ನಿಯಮ 26(7) ರಂತೆ ಮತ್ತು ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಮಾರ್ಗಸೂಚಿಗಳನ್ವಯ ಮಕ್ಕಳ ಸಂಖ್ಯೆಗಳಿಗನುಗುಣವಾಗಿ ಬಾಲಮಂದಿರಗಳನ್ನು ಸ್ಥಾಪಿಸಲಾಗುತ್ತಿದ್ದು, ತಾಲ್ಲೂಕುವಾರು ಸ್ಥಾಪಿಸಿರುವುದಿಲ್ಲ. ಅದರಂತೆ ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯಲ್ಲಿರುವ ಬಾಲಮಂದಿರಗಳಲ್ಲಿ ಆಶ್ರಯ ಪಡೆದಿರುವ ಬಾಲಕರ ಮತ್ತು ಬಾಲಕಿಯರ ಸಂಖ್ಯೆಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.
ಆ)	ವಿಜಯಪುರ, ಬಾಗಲಕೋಟೆ,ಬೆಳಗಾವಿ ಈ ಜಿಲ್ಲೆಗಳಲ್ಲಿ ಎಷ್ಟು ಮಹಿಳಾ ನಿಲಯಗಳು ಇವೆ; ಬಾಡಿಗೆ ಪಡೆದ ಕಟ್ಟಡಗಳ ಸಂಖ್ಯೆ ಎಷ್ಟು; ಸರ್ಕಾರಿ ನಿಲಯಗಳು (ಸ್ವಂತ) ಎಷ್ಟು;	ವಿಜಯಪುರ, ಬಾಗಲಕೋಟೆ,ಬೆಳಗಾವಿ ಜಿಲ್ಲೆಗಳಲ್ಲಿ ಮಹಿಳಾ ನಿಲಯಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ.
ಇ)	ಬಾಡಿಗೆ ನಿಲಯಗಳು ಕಟ್ಟಡಗಳಿಗೆ ವರ್ಷಕ್ಕೆ ನೀಡುತ್ತಿರುವ ಬಾಡಿಗೆ ಎಷ್ಟು; (ಈ ಕುರಿತು ವಿವರವಾದ ಸಂಪೂರ್ಣ ಮಾಹಿತಿ ನೀಡುವುದು)	ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಯನ್ವಯ ಬಾಲಮಂದಿರಗಳನ್ನು ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲು ಪ್ರತಿ ಮಾಹೆ ರೂ.35,000/- ಗಳ ಅನುದಾನ ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಪ್ರತಿ ಬಾಲಮಂದಿರಗಳಿಗೆ ವಾರ್ಷಿಕವಾಗಿ ರೂ.4.20 ಲಕ್ಷಗಳನ್ನು ಜಿಲ್ಲೆಗಳಲ್ಲಿ ಇರುವ ಬೇಡಿಕೆ ಆಧಾರದನ್ವಯ ಒಟ್ಟು 16 ಸರ್ಕಾರಿ ಬಾಲಮಂದಿರಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಈ)	ಮಹಿಳಾ ನಿಲಯಗಳ ಸುರಕ್ಷತೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; ಬಾಡಿಗೆ ನಿಲಯಗಳಲ್ಲಿ ಹೇಗೆ ಸುರಕ್ಷತೆ ನೀಡಲಾಗುತ್ತಿದೆ? (ಈ ಕುರಿತು ಮಾಹಿತಿ ನೀಡುವುದು)	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 8 ರಾಜ್ಯ ಮಹಿಳಾ ನಿಲಯಗಳು ಹಾಗೂ 3 ಸ್ವೀಕಾರ ಕೇಂದ್ರಗಳು ಸ್ವಂತ ಕಟ್ಟಡಗಳಲ್ಲಿ ಹಾಗೂ ಒಂದು ಸ್ವೀಕಾರ ಕೇಂದ್ರವು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮಹಿಳಾ ನಿಲಯಗಳಲ್ಲಿ ನಿವಾಸಿಗಳ ಸುರಕ್ಷತೆಗಾಗಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ನಿಲಯಗಳಿಗೆ ಒಂದೇ ಪ್ರವೇಶ ಹಾಗೂ ನಿರ್ಗಮ ಮಾರ್ಗಗಳಿವೆ. ಗೇಟ್ ರಿಜಿಸ್ಟರ್ ನಲ್ಲಿ ಸಂದರ್ಶಕರ ವಿವರಗಳನ್ನು ನಮೂದು ಮಾಡುವ ವ್ಯವಸ್ಥೆ ಇದೆ. 24X7 ಮಹಿಳಾ ರಕ್ಷಕಿಯರ ಸೇವೆಯನ್ನು ಒದಗಿಸಲಾಗಿದೆ. ಪುರುಷರಿಗೆ ಮಹಿಳಾ ನಿಲಯಗಳಲ್ಲಿ ಪ್ರವೇಶ ನಿಷೇದಿಸಲಾಗಿದೆ. ಸಂದರ್ಶಕರು ಇಲಾಖಾ ಮುಖ್ಯಸ್ಥರ ಅಥವಾ ಜಿಲ್ಲೆಗಳಲ್ಲಿ ಉಪನಿರ್ದೇಶಕರ ಅನುಮತಿ ಪಡೆದೇ ನಿಲಯಗಳಿಗೆ ಭೇಟಿ ನೀಡುವ ವ್ಯವಸ್ಥೆಗಳನ್ನು ಅನುಸರಿಸಲಾಗುತ್ತಿದೆ. ಪೊಲೀಸ್ ಬೀಟ್ ವ್ಯವಸ್ಥೆ ಕಲ್ಪಿಸಲಾಗಿದೆ.

ಸಂಖ್ಯೆ: ಮಮಇ 23 ಮಭಾಬ 2022

Halappa BA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅನುಬಂಧ–1

ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:584(735)ಗೆ ಮಾಹಿತಿ.

ಬಾಗಲಕೋಟೆ, ಬೆಳಗಾವಿ, ವಿಜಯಪುರ ಜಿಲ್ಲೆಯ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳ ಮಾಹಿತಿ 16-02-2022ರಂತೆ.

ಕ್ರ.ಸಂ	ಜಿಲ್ಲೆ	ಸಂಸ್ಥೆಯ ಹೆಸರು	ಒಟ್ಟು
01	ಬಾಗಲಕೋಟೆ	ಬಾಲಕರ ಬಾಲಮಂದಿರ	44
02		ಬಾಲಕಿಯರ ಬಾಲಮಂದಿರ	50
03	ಬೆಳಗಾವಿ	ಬಾಲಕರ ಅನುಪಾಲನ ಗೃಹ	14
04		ಸರ್ಕಾರಿ ಬಾಲಕರ ಬಾಲಮಂದಿರ(ಜೂನಿಯರ್)	27
05		ಸರ್ಕಾರಿ ಬಾಲಕರ ಬಾಲಮಂದಿರ(ಸೀನಿಯರ್)	19
06		ಬಾಲಕಿಯರ ಬಾಲಮಂದಿರ	53
07	ವಿಜಯಪುರ	ಬಾಲಕರ ಬಾಲಮಂದಿರ (ಜೂನಿಯರ್)	46
09		ಬಾಲಕರ ಬಾಲಮಂದಿರ (ಸೀನಿಯರ್)	19
09		ಬಾಲಕಿಯರ ಬಾಲಮಂದಿರ	49
		ಒಟ್ಟು	321

ಯೋಜನಾ ನಿರ್ದೇಶಕರು(ಪ್ರ),
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

ಅನುಬಂಧ-2

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 584(735)ಗೆ ಮಾಹಿತಿ.

ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಾಲಮಂದಿರಗಳ ವಿವರ

ಕ್ರ ಸಂ	ಜಿಲ್ಲೆಯ ಹೆಸರು	ಬಾಲಮಂದಿರಗಳು	ಪ್ರತಿ ಮಾಹೆ ಪಾವತಿಸುತ್ತಿರುವ ಬಾಡಿಗೆ ಮೊತ್ತ ರೂ.ಗಳಲ್ಲಿ
1	ಉತ್ತರ ಕನ್ನಡ	ಬಾಲಕಿಯರ ಬಾಲಮಂದಿರ	17000/-
2	ಚಾಮರಾಜನಗರ	ಬಾಲಕಿಯರ ಬಾಲಮಂದಿರ	30000/-
3		ಬಾಲಕರ ಬಾಲಮಂದಿರ	22,800/-
4	ಗದಗ	ಬಾಲಕಿಯರ ಬಾಲಮಂದಿರ	24300/-
5	ಹಾವೇರಿ	ಬಾಲಕಿಯರ ಬಾಲಮಂದಿರ	10,970/-
6	ಕೊಪ್ಪಳ	ಬಾಲಕರ ಬಾಲಮಂದಿರ	35000/-
7		ಬಾಲಕಿಯರ ಬಾಲಮಂದಿರ	35000/-
8	ಮಂಡ್ಯ	ಬಾಲಕರ ಬಾಲಮಂದಿರ	35000/-
9		ಬಾಲಕಿಯರ ಬಾಲಮಂದಿರ	35000/-
10	ರಾಮನಗರ	ಬಾಲಕಿಯರ ಬಾಲಮಂದಿರ	35000/-
11	ರಾಯಚೂರು	ಬಾಲಕರ ಬಾಲಮಂದಿರ	30000/-
12		ಬಾಲಕಿಯರ ಬಾಲಮಂದಿರ	30000/-
13	ಚಿಕ್ಕಬಳ್ಳಾಪುರ	ಬಾಲಕಿಯರ ಬಾಲಮಂದಿರ	22,550/
14	ಶಿವಮೊಗ್ಗ	ಬಾಲಕಿಯರ ಬಾಲಮಂದಿರ	35000/-
15	ತುಮಕೂರು	ಬಾಲಕರ ಬಾಲಮಂದಿರ	25,160/-
16	ಚಿಕ್ಕಮಗಳೂರು	ಬಾಲಕಿಯರ ಬಾಲಮಂದಿರ	32000/-

ಯೋಜನಾ ನಿರ್ದೇಶಕರು(ಪ್ರ)
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

E/Bir/CH OH 2021-22/sow